**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 10.02.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಜಿ ವಕೀಲರಿಂದ**

ಸರ್ವೆ ನಂ 201/2 ರಲ್ಲಿ ವಿಸ್ತೀರ್ಣ 2.20 ಗುಂಟೆ ಇರುತ್ತದೆ ಎಂದರೆ ಗೊತ್ತಿಲ್ಲ. ನಿಡಿ 5 ನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ . ನಿಡಿ 5 ರಂತೆ ಪೌತಿ ಮೇರೆಗೆ ಖಾತೆ ಆಗಿರುತ್ತದೆ ಎಂದರೆ ಸರಿ . ಸದರಿ ಸ್ವತ್ತುಗಳಲ್ಲಿ ನಾವು ಜಂಟಿ ಖಾತೆಯಲ್ಲಿದ್ದೇವೆ ಎಂದರೆ ಸರಿ . ಸರ್ವೆ ನಂ 201/1 ಪೌತಿ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸರಿ . ಸರ್ವೆ ನಂ 3/29ಪಿ 2 ಪೌತಿ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸರಿ . ನಿಡಿ 7 ರಲ್ಲಿ ಪಿತ್ರಾರ್ಜಿತ ಸ್ವತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿ . ಸರ್ವೆ ನಂ 7/4 ನಿಡಿ 8 ರಂತೆ ಪೌತಿ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸರಿ . ಸರ್ವೆ ನಂ 3/27 ನಿಡಿ 9 ರಂತೆ ಪೌತಿ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸರಿ . ನಾನು ನಮ್ಮ ಅಣ್ಣ ತಮ್ಮದಿಂರು ಎಲ್ಲಾ ಸೇರಿ ನಿಡಿ 10 ರಂತೆ ಆದಾರ ಮಾಡಿ ರದ್ದು ಪಡಿಸಿರುತ್ತೇವೆ ಎಂದರೆ ಸರಿ . ನಿಡಿ 11 ರಂತೆ ಸರ್ವೆ ನಂ 3/27, 7/4, 3/29ಪಿ 2 ಸ್ವತ್ತುಗಳನ್ನು ಆದಾರ ಮಾಡಿ ರದ್ದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 2 ರಂತೆ ನನ್ನ ತಂದೆಗೆ ಸರಕಾರದಿಂದ ಮಂಜೂರಾದ ಜಮೀನು ಎಂದರೆ ಸರಿ . ನನ್ನ ತಂದೆ ತಾಯಿ ಮರಣ ಹೊಂದಿರುತ್ತಾರೆ ಎಂದರೆ ಸರಿ . ದಾವಾಸ್ವತ್ತುಗಳು ನನ್ನ ಮತ್ತು ಪ್ರತಿವಾದಿಗಳೆಲ್ಲರ ಸ್ವಾದೀನದಲ್ಲಿರುತ್ತದೆ ಎಂದರೆ ಸರಿ . ನನಗೆ ಬರುವಂತಹ ಹಿಸ್ಸೆಯಲ್ಲಿ ವಾದಿಗೆ ಅರ್ಧ ಹಿಸ್ಸೆ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

ನಾನು ಸುಂದರ ನಗರ ಇಂಡಸ್ಟ್ರಿಯಲ್ ಏರಿಯಾ ಎಂ ಎಸ್ ಐ ಎಲ್ ವೇರ್ ಹೌಸ್ ನಲ್ಲಿ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ತಿಂಗಳಿಗೆ ರೂ 15-20 ಸಾವಿರದವರೆಗೆ ಸಂಬಳ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ಹೆಂಡತಿಯನ್ನು ಹೊರಗೆ ಹಾಕಿದ ಮೇಲೆ ಅವರನ್ನು ಯಾವತ್ತೂ ಮನೆಗೆ ಕರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಮನೆಗೆ ಬರುವುದಾಗಿ ವಕೀಲರ ಮುಖಾಂತರ ನೋಟಿಸನ್ನು ನೀಡಿರುತ್ತೇನೆ. ಸದರಿ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನನ್ನ ಹಕ್ಕನ್ನು ದುರುಪಯೋಗಪಡಿಸಿಕೊಂಡು ನನ್ನ ಮಗಳಿಗೆ ಮತ್ತು ಹೆಂಡತಿಗೆ ಭಾಗಾಂಶದಲ್ಲಿ ಅಥವಾ ಜೀವನಾಂಶ ಕೊಡದೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರಕವಾಗಿ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಕಾನೂನು ಪ್ರಕಾರ ಭಾಗಂಶ ಕೊಡಬೇಕು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ